## 33

# ನಜರೇತಿನಲ್ಲಿ ನಿರಾಕರಿಸಿದ್ದು

## (13:53-58)

ಬದಲಾವಣೆಯ ಈ ಭಾಗವು ಹೊಸ ವಿಭಾಗದ ಪ್ರಾರಂಭಕ್ಕೆ ನಾಂದಿಯಾಗಿದೆ ಮತ್ತು 12:46-50ಕ್ಕೆ ಉತ್ತರಾರ್ಧವಾಗಿ 13ನೇ ಅಧ್ಯಾಯದ ಸಾಮ್ಯಗಳಿಗೆ ಮುಕ್ತಾಯವನ್ನು ಸಹ ನೀಡುತ್ತದೆ. ಎರಡು ವಾಕ್ಯಭಾಗಗಳು ಜನರ ತಪ್ಪುತಿಳುವಳಿಕೆಯನ್ನು ಮತ್ತು ಯೇಸುವಿನ ತಾತ್ಸಾರ ಮಾಡಿದ್ದರ ವೈಶಿಷ್ಟತೆಯನ್ನು ತಿಳಿಸುತ್ತದೆ, ಅಲ್ಲದೇ ಯೇಸುವಿನ ಭೂಲೋಕದ ಕುಟುಂಬದ ಕುರಿತು ತಿಳಿಸುತ್ತದೆ.

### "ಆಶ್ಚರ್ಯಗೊಂಡರು" (13:53-56)

**[53]ಯೇಸು ಈ ಸಾಮ್ಯಗಳನ್ನು ಮುಗಿಸಿದ ಮೇಲೆ ಅಲ್ಲಿಂದ ಹೊರಟುಹೋದನು.**
**[54]ತರುವಾಯ ಆತನು ತನ್ನ ಊರಿಗೆ ಬಂದು ಅಲ್ಲಿರುವ ಸಭಾಮಂದಿರದಲ್ಲಿ ಜನರಿಗೆ**
**ಉಪದೇಶ ಮಾಡುತ್ತಿದ್ದನು. ಅವರು ಕೇಳಿ ಅತ್ಯಾಶ್ಚರ್ಯಪಟ್ಟು - ಇವನಿಗೆ ಈ ಜ್ಞಾನವೂ ಈ**
**ಮಹತ್ಕಾರ್ಯಗಳೂ ಎಲ್ಲಿಂದ ಬಂದಿದ್ದಾವೂ? [55]ಇವನು ಆ ಬಡಗಿಯ ಮಗನಲ್ಲವೇ. ಇವನ**
**ತಾಯಿ ಮರಿಯಳೆಂಬವಳಲ್ಲವೇ. ಯಾಕೋಬ ಯೋಸೇಫ ಸಿಮೋನ ಯೂದ ಇವರು**
**ಇವನ ತಮ್ಮಂದಿರಲ್ಲವೇ. [56]ಇವನ ತಂಗಿಯರೆಲ್ಲರು ನಮ್ಮಲ್ಲಿ ಇದ್ದಾರಲ್ಲವೇ. ಹಾಗಾದರೆ**
**ಇವೆಲ್ಲಾ ಇವನಿಗೆ ಎಲ್ಲಿಂದ ಬಂದಿದ್ದಾವು? ಎಂದು ಮಾತಾಡಿಕೊಂಡು ಆತನ ವಿಷಯವಾಗಿ**
**ಬೇಸರಗೊಂಡರು.**

**ವಚನ 53. ಯೇಸು ಮುಗಿಸಿದ ಮೇಲೆ** ಎಂಬ ವಾಕ್ಯಭಾಗವು ಮತ್ತಾಯನ ಸುವಾರ್ತೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಸೂಚಿಸಲಾಗಿದೆ, ಬೋಧನೆಯ ವಿಭಾಗವನ್ನು ಮುಕ್ತಾಯಗೊಳಿಸಿದ್ದು (7:28, 29; 11:1; 13:53; 19:1; 26:1). ಕರ್ತನು ತನ್ನ **ಸಾಮ್ಯಗಳನ್ನು ಮುಗಿಸಿದ ಮೇಲೆ,** ಆತನು ಅಲ್ಲಿಂದ ಹೊರಟುಹೋದನು; ಅದುವೆ, ಆತನು ಕಪೆರ್ನೌಮನ್ನು ಬಿಟ್ಟು ಹೋದನು.

**ವಚನ 54.** ಯೇಸು **ತನ್ನ ಸ್ವಂತ ಊರಾದ,** ಗಲಿಲಾಯದಲ್ಲಿರುವ ನಜರೇತಿಗೆ ಬಂದನು (2:23ರ ಮೇಲಿನ ವ್ಯಾಖ್ಯಾನ ನೋಡಿರಿ). ಇದು ಖಂಡಿತವಾಗಿಯೂ ಮೊದಲನೆಯ ಸಾರಿ ಆಗಿರಲಿಲ್ಲ ಆತನು ತನ್ನ ವೈಯಕ್ತಿಕ ಸೇವೆಯ ಪ್ರಾರಂಭದಿಂದಲೇ ತನ್ನ ಸ್ವಂತ ಊರಿಗೆ ಬೇಟಿ ನೀಡಿದನು. ಲೂಕ 4:16:30 ಅಡವಿಯಲ್ಲಿ ಶೋಧನೆಗೆ ಒಳಗಾದ ಸ್ವಲ್ಪದರಲ್ಲಿಯೇ ಮತ್ತು ಕಪೆರ್ನೌಮಿನಲ್ಲಿ ವಾಸಿಸುವದಕ್ಕೆ ಪ್ರಾರಂಭಿಸುವ ಪೂರ್ವದಲ್ಲಿ ಬೇಟಿನೀಡಿದ್ದನ್ನು ಪ್ರಸ್ತಾಪಿಸುತ್ತದೆ. ಮತ್ತಾಯನು ಮತ್ತು ಮಾರ್ಕನ ಸುವಾರ್ತೆಯಲ್ಲಿ ಯೇಸು ತನ್ನ ಸೇವೆಯ ನಂತರ ದಿನಗಳಲ್ಲಿ ನಜರೇತಿಗೆ ಬೇಟಿ ನೀಡಿರುವದನ್ನು ಓದುತ್ತೇವೆ (ಮಾರ್ಕ 6:1-6).

"ತನ್ನ ವಾಡಿಕೆಯ ಪ್ರಕಾರ" (ಲೂಕ 4:16), ಯೇಸು ಅವರ **ಸಭಾಮಂದಿರಕ್ಕೆ ಹೋದನು ಮತ್ತು ಅವರಿಗೆ ಬೋಧಿಸಲು ಪ್ರಾರಂಭಿಸಿದನು.** ಮಾರ್ಕನು ಹೇಳುವಂತೆ, ಈ ಘಟನೆಯ ಸಬ್ಬತ್ ದಿನದಲ್ಲಿ ಸಂಭವಿಸಿದವು ಎಂದು ದಾಖಲಿಸುತ್ತಾನೆ (ಮಾರ್ಕ 6:2). ಮತ್ತಾಯನ ಈ ವಾಕ್ಯಭಾಗವು ಯೇಸು ಸಭಾಮಂದಿರದಲ್ಲಿ ಬೋಧಿಸಿದನು ಎಂಬುದಕ್ಕೆ

ಸುವಾರ್ತೆಯಲ್ಲಿ ಕೊನೆಯ ಉಲ್ಲೇಖವಾಗಿದೆ. ಆತನ ಸ್ವಂತ ಊರಾದ ನಜರೇತಿನ ಜನರು ಆತನ ಬೋಧನೆಯನ್ನು ಕೇಳಿ ಅತ್ಯಾಶ್ಚರ್ಯಪಟ್ಟರು ಮತ್ತು **ಇವನಿಗೆ ಈ ಜ್ಞಾನವೂ ಈ ಮಹಾತ್ಕಾರ್ಯಗಳು ಎಲ್ಲಿಂದ ಬಂದಿದ್ದಾವೂ?** ಎಂದು ಪ್ರಶ್ನಿಸಿದರು. ಅವರು ಆತನ ಜೀವಿತದ ಕುರಿತಾಗಿ ಬಹಳ ಮಟ್ಟಿಗೆ ತಿಳಿದಿದ್ದರು (ನೋಡಿರಿ 2:19-23). ನಜರೇತನ್ನು ಹೋಗುವ ಬಿಡುವ ಮೊದಲು, ಸಂಚಾರಿ ಬೋಧಕನಾಗಲಿ ಅಥವಾ ಅದ್ಭುತಗಳನ್ನು ಮಾಡುವವನಾಗಲಿ ಆಗಿರಲಿಲ್ಲ; ಆದರೆ ಈಗ ಆತನು ಎರಡೂ ಆಗಿದ್ದಾನೆ.

**ವಚನ 55.** ಜನರು ಯೇಸುವನ್ನು **ಒಬ್ಬ ಬಡಗಿಯ ಮಗನೆಂದು** ತಿಳಿದಿದ್ದರು. ಆತನು ತನ್ನ ಭೂಲೋಕದ ತಂದೆಯ ಹೆಜ್ಜಾಡಿನಲ್ಲಿ ನಡೆಯುವವನಾಗಿದ್ದನು ಮತ್ತು ತಾನೇ ಬಡಗಿ ಸಹ ಆಗಿದ್ದನು (ಮಾರ್ಕ 6:3). ಯೆಹೂದ್ಯರ ಮಗನಿಗೆ ತನ್ನ ತಂದೆಯ ಉದ್ಯೋಗವನ್ನೇ ಕಲಿಯುವದು ವಾಡಿಕೆಯಾಗಿತ್ತು (ನೋಡಿರಿ ಫಿಲಿಪ್ಪ 2:22). ಯೆಹೂದ್ಯರ ಒಂದು ಗಾದೆ ಹೀಗೆ ಹೇಳುತ್ತದೆ, "ತನ್ನ ಕೌಶಲ್ಯವನ್ನು ಮಗನಿಗೆ ಕಲಿಸದಿರುವ ತಂದೆಯು ಅವನಿಗೆ ಕಳ್ಳತನ ಮಾಡುವದನ್ನು ಕಲಿಸುತ್ತಾನೆ."[1] ಗ್ರೀಕ್ ಶಬ್ದ *tektōn* ಸಂಪ್ರದಾಯಿಕವಾಗಿ "ಬಡಗಿ" ಎಂದು ಅರ್ಥೈಸಲಾಗುತ್ತದೆ. ಯೇಸುವನ್ನು ಕೆಲವೊಮ್ಮೆ ತಂದೆಯ ಬಡಿಗರ ಅಂಗಡಿಯಲ್ಲಿ ಬೆಳೆಯುತ್ತಿರುವ ಹಾಗೆ ಚಿತ್ರಿಸಲಾಗಿದೆ, ಬಹುಶಃ ಮನೆಗೆ ಬೇಕಾದ ಪಿಠೋಪಕರಣಗಳು ಮತ್ತು ವ್ಯವಸಾಯದ ಸಾಧನಗಳನ್ನು ತಯಾರಿಸುತ್ತಿರಬಹುದು. ಆದರೂ ಸಹ, *tektōn* ಎನ್ನುವ ಪದವನ್ನು "ಕಲ್ಲುಕಟಿಗೆ" ಅಥವಾ "ಕಟ್ಟುವವ" ಇವುಗಳಿಗೆ ಸಹ ಸಾಮಾನ್ಯವಾಗಿ ಉಪಯೋಗಿಸುವರು.[2] ನಂತರದ ವ್ಯಾಖ್ಯಾನ ಆಧುನಿಕ ಸತ್ಯವೇದ ಪಂಡಿತರಿಂದ ಹೆಚ್ಚಾಗಿ ಸ್ವೀಕರಿಸಲ್ಪಟ್ಟಿದೆ. ಯೋಸೇಫನು ಮತ್ತು ಯೇಸು ತಮ್ಮ ವೃತ್ತಿಯಿಂದಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಂಚರಿಸಿರಬಹುದು, ಮುಖ್ಯ ಪಟ್ಟಣಗಳಾದ ಕೈಸರೆ ಮತ್ತು ತಿಬೇರಿಯಕ್ಕೆ ಹೋಗುವ ಮುಖ್ಯ ರಸ್ತೆಯ ಸಮೀಪದಲ್ಲಿ ನಜರೇತ್ ಸ್ಥಾಪಿತವಾಗಿರುವದರಿಂದ ಅವರಿಗೆ ಉತ್ತಮವಾಗಿತ್ತು.[3] ಇದರೊಟ್ಟಿಗೆ ಸೆಫೂರಿಸ್ ಸಹ ನಜರೇತಿನಿಂದ ಕೆಲವು ಮೈಲು ಉತ್ತರಕ್ಕೆ ಇದೆ ಮತ್ತು ಯೇಸುವಿನ ಯೌವನ ಪ್ರಾಯದಲ್ಲಿ ಇದು ಅಂತಿಫಸ್ ಹೆರೋದನಿಂದ ಮತ್ತೆ ಕಟ್ಟಲ್ಪಟ್ಟಿತ್ತು. ಕಟ್ಟುವ ಕಾರ್ಯಕ್ಕಾಗಿ ಯೋಸೇಫ ಮತ್ತು ಯೇಸು ನಿರಂತರವಾಗಿ ಅಲ್ಲಿಗೆ ಪ್ರಯಾಣಿಸಿರಬಹುದು.[4]

ಜನರು **ಮರಿಯಳನ್ನು ಯೇಸುವಿನ ತಾಯಿಯೆಂದು, ಯಾಕೋಬನು** ಮತ್ತು ಯೋಸೇಫನು ಮತ್ತು **ಸೀಮಿಯೋನ ಮತ್ತು ಯೂದನು ಯೇಸುವಿನ ಸಹೋದರರೆಂದು** ಗುರುತಿಸಿದರು (12:46ರ ಮೇಲಿನ ವ್ಯಾಖ್ಯಾನ ನೋಡಿರಿ).

**ವಚನ 56. ಇವನ ತಂಗಿಯರೆಲ್ಲರು ನಮ್ಮಲ್ಲಿ ಇದ್ದಾರಲ್ಲವೇ?** ಎಂದು ಕೇಳಿದರು. ಅವರ ಪ್ರಶ್ನೆ ಯೇಸುವಿಗೆ ಕನಿಷ್ಟ ಇಬ್ಬರು ಸಹೋದರಿಯರು ಇದ್ದರೆಂದು ಸೂಚಿಸುತ್ತದೆ, ಮತ್ತು "ಎಲ್ಲರೂ" ಎಂಬ ವಿಶೇಷಣ ಅನೇಕರಿದ್ದರೆಂದು ಸೂಚಿಸುತ್ತದೆ. ಈ ಸ್ತ್ರೀಯರನ್ನು ಕೇವಲ ಈ ವಚನದಲ್ಲಿ ಮತ್ತು ಮಾರ್ಕ 6:3ರಲ್ಲಿ ಸೂಚಿಸಲಾಗಿದೆ, ಮತ್ತು ಅವರ ಹೆಸರುಗಳನ್ನು ಕೊಟ್ಟಿರುವುದಿಲ್ಲ. ಕೆಲವರು ಈ ಪ್ರಶ್ನೆ ಇನ್ನೂ ಎರಡು ವಿಚಾರಗಳ ಸಲಹೆಯನ್ನು ನೀಡುತ್ತದೆ ಎಂದು ನಂಬುತ್ತಾರೆ. ಮೊದಲನೆಯದಾಗಿ, ಯೇಸುವಿನ ಸಹೋದರಿಯರೆಲ್ಲರು "ನಮ್ಮಲ್ಲಿ ಇದ್ದಾರಲ್ಲವೇ" ಇದರ ಅರ್ಥ ಅವರು ಸ್ವಂತ ಊರಿನಲ್ಲಿ ವಿವಾಹವಾಗಿ ನಜರೇತಿನಲ್ಲಿ ನೆಲೆಯಾಗಿರಬಹುದು. ಎರಡನೆಯದಾಗಿ, ಮರಿಯಳು ಮತ್ತು ಸಹೋದರರು ಅಲ್ಲಿ ವಾಸಿಸುತ್ತಿರಲಿಕ್ಕಿಲ್ಲ. ಬಹುಶಃ ಅವರು ಯೇಸು (ಹಿರಿಯ ಮಗ) ಕಪೆರ್ನೌಮಿಗೆ ನೆಲೆಸಿದಾಗ ಆತನೊಂದಿಗೆ ಹೋಗಿರಬಹುದು. ಈ ವಾಕ್ಯಭಾಗದಲ್ಲಿ ಆತನ ಭೂಲೋಕದ ತಂದೆಯ ಹೆಸರು ಇಲ್ಲಿ ಬರೆಯಲ್ಪಟ್ಟಿಲ್ಲ, ಬಹುಶಃ ಆತನು ಆಗಲೇ ಮರಣಹೊಂದಿರಬಹುದು.

ಜನರು **ಇವೆಲ್ಲಾ ಇವನಿಗೆ ಎಲ್ಲಿಂದ ಬಂದಿದ್ದಾವು?** ಎಂದು ಕೇಳಿದರು. ತಮಗೆ ತಿಳಿಯದೇ

ಇರುವ ಯೇಸುವಿನ ಈ ವ್ಯಕ್ತಿತ್ವವನ್ನು ನೋಡಿ ಅವರು ಅತ್ಯಾಶ್ಚರ್ಯಪಟ್ಟರು.

## "ಬೇಸರಗೊಳ್ಳುವದು" (13:57)

**57ಆದರೆ ಯೇಸು ಅವರಿಗೆ - ಪ್ರವಾದಿಯು ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆ ಉಂಟು; ಆದರೆ ಸ್ವದೇಶದಲ್ಲಿಯೂ ಸ್ವಂತ ಮನೆಯಲ್ಲಿಯೂ ಮಾತ್ರ ಮರ್ಯಾದೆಯಿಲ್ಲ ಅಂದನು.**

**ವಚನ 57.** ಯೇಸುವಿನ ನಜರೇತಿನ ಸಹಪಾಠಿಗಳು ತನ್ನನ್ನು ಸರಿಯಾಗಿ ತಿಳಿದುಕೊಂಡದ್ದರಿಂದ **ಆತನ ವಿಷಯವಾಗಿ ಬೇಸರಗೊಂಡರು.** ನಜರೇತಿನ ಜನರು ತಮ್ಮ ಮಧ್ಯದಲ್ಲಿಂದ ದೇವರು ಒಬ್ಬ ಪ್ರವಾದಿಯನ್ನು ಎಬ್ಬಿಸಬಹುದು ಎಂಬುದನ್ನು ನಂಬಿರಲಿಲ್ಲ (ನೋಡಿರಿ ಯೋಹಾನ 1:46). ಆತನ ಬೋಧನೆಗಳು ಅವರ ಅನೇಕ ನಂಬಿಕೆಗಳಿಗೆ ಪಂಥಾಹ್ವಾನ ನೀಡಿದ್ದವು (ಲೂಕ 4:23-27). ("ಬೇಸರ ಗೊಂಡರು" ಎಂಬುದಕ್ಕೆ 11:6ರ ಮೇಲಿನ ವ್ಯಾಖ್ಯಾನ ನೋಡಿರಿ.) ಜನ ಸಮೂಹವು ಯೇಸುವನ್ನು ತಾತ್ಸಾರ ಮಾಡಿದ್ದರಿಂದ **ಪ್ರವಾದಿಯು ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆ ಉಂಟು; ಆದರೆ ಸ್ವದೇಶದಲ್ಲಿಯೂ ಸ್ವಂತ ಮನೆಯಲ್ಲಿಯೂ ಮಾತ್ರ ಮರ್ಯಾದೆಯಿಲ್ಲ** ಎಂದು ಹೇಳುವದಕ್ಕೆ ಕಾರಣವಾಯಿತು.

## "ಅಪನಂಬಿಕೆ" (13:58)

**58ಅವರು ಆತನನ್ನು ನಂಬದೆ ಹೋದದರಿಂದ ಆತನು ಅಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲ.**

**ವಚನ 58. ಅವರ ಅಪನಂಬಿಕೆಯ** ಕಾರಣದಿಂದಾಗಿ, ಯೇಸು ಅಲ್ಲಿ **ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲ.** ಮಾರ್ಕನ ಪ್ರಕಾರ "ಆತನು ಅಲ್ಲಿ ಕೆಲವು ಮಂದಿ ರೋಗಿಗಳ ಮೇಲೆ ಕೈಯಿಟ್ಟು ಸ್ವಸ್ಥಮಾಡಿದ್ದೇ ಹೊರತು ಬೇರೆ ಯಾವ ಮಹತ್ಕಾರ್ಯವನ್ನು ಮಾಡುವದಕ್ಕಾಗಲಿಲ್ಲ" (ಮಾರ್ಕ 6:5). ಮತ್ತಾಯನ ಹೇಳಿಕೆಯು, ಜನರ ನಂಬಿಕೆಯ ಕೊರತೆಯಿದದ್ದರಿಂದ ಯೇಸು ಅದ್ಭುತ ಕಾರ್ಯಗಳನ್ನು ಮಾಡುವದರಲ್ಲಿ ವಿಫಲನಾದನು ಎಂಬುದನ್ನು ಸೂಚಿಸುವದೋ? ಬಹುಶ ಇರಲಿಕ್ಕಿಲ್ಲ. ಜನರು ಆತನಲ್ಲಿ ನಂಬಿಕೆಯನ್ನು ಇಡದೇ ಹೋದದ್ದರಿಂದ, ಕೆಲವರು ಮಾತ್ರ ಅದ್ಭುತಕಾರ್ಯಕ್ಕಾಗಿ ಆತನ ಬಳಿಗೆ ಬಂದರು ಎಂಬುದನ್ನು ಈ ಪಠ್ಯವು ಸ್ಪಷ್ಟವಾಗಿ ಸೂಚಿಸುತ್ತದೆ. ಯಾರು ಆತನಲ್ಲಿ ನಂಬಿಕೆಯಿಟ್ಟರೋ ಅವರು ಆತನ ಬಳಿಗೆ ಬಂದರು ಮತ್ತು ಸ್ವಸ್ಥತೆಯನ್ನು ಹೊಂದಿದರು. ಇಲ್ಲಿ ಯೇಸುವಿನ ಶಕ್ತಿ ವಿಷಯವಲ್ಲ ಬದಲಾಗಿ ಯೇಸುವನ್ನು ಮತ್ತು ಆತನ ಬೋಧನೆಗಳನ್ನು ಸ್ವೀಕರಿಸುವಲ್ಲಿ ಜನರ ಹಟಮಾರಿತನದ ತಾತ್ಸಾರ ಕಾರಣವಾಗಿತ್ತು.

### ಪಾಠಗಳು

## ನಾವು ಕ್ರಿಸ್ತನ ನಿಮಿತ್ತ ಬೇಸರಗೊಂಡಿದ್ದೇವೋ? (13:53-58)

ಜನರು ಕ್ರಿಸ್ತನಿಂದಾಗಿ ಬೇಸರಗೊಂಡರು. ಆತನ ಊರಿನ ಜನರು ಆತನ ಮೇಲೆ ಬೇಸರ ಗೊಂಡರು (13:57; ಮಾರ್ಕ 6:3; ಲೂಕ 4:28, 29; ನೋಡಿರಿ ಯೋಹಾನ 1:46). ಇಂದು ಜನರು ಏಕೆ ಬೇಸರಗೊಂಡಿದ್ದಾರೆ?

1. *ಕ್ರಿಸ್ತನು ಲೌಕಿಕವಾದದ್ದಕಿಂತ ಹೆಚ್ಚಾಗಿ ಆತ್ಮೀಕ ವಾದವುಗಳಿಗೆ ಹೆಚ್ಚು ಕಳಕಳಿ ಉಳ್ಳವನಾಗಿದ್ದಾನೆ.* ಆತನು ದೈಹಿಕ ದೇಹದ ಕುರಿತು ಕಳಕಳಿ ಉಳ್ಳವನಾಗಿದ್ದಾನೆ. ಆದರೆ ಆತನು ಅದರಲ್ಲಿ ಸರಿಯಾದ ದೃಷ್ಟಿಕೋನವನ್ನು ಇಡುತ್ತಾನೆ. ನಾವು ಪ್ರಾಮುಖ್ಯವಾದವುಗಳನ್ನು ಎಲ್ಲಿ ಇಡುತ್ತೇವೆ? ನಮ್ಮ ಸಮಾಜವು ಲೌಕಿಕವಾದವುಗಳಲ್ಲಿ ಅಮಲೇರಿದೆ, ಸಂಪರ್ಕ ಮಾಧ್ಯಮಗಳಾದ ದೂರದರ್ಶನ ನಮ್ಮ ಮಕ್ಕಳಿಗೆ ಸ್ವಾರ್ಥವನ್ನು ಅಲ್ಲಗಳೆಯುವದು, ನಿಸ್ವಾರ್ಥ ಮತ್ತು ಸ್ವ-ತ್ಯಾಗ ಇವುಗಳನ್ನು ಬದಲಾಗಿ ಸ್ವಾರ್ಥಪರತೆ ಮತ್ತು ಸ್ವ-ಕರುಣೆ ಇವುಗಳನ್ನು ಬೋಧಿಸುತ್ತಿವೆ, ಜೀವನದಲ್ಲಿ ನಿಜವಾಗಿ ಪ್ರಾಮುಖ್ಯವಾಗಿರುವದರ ಕುರಿತು ಅವರು ಏನನ್ನು ಕಲಿಯುತ್ತಿದ್ದಾರೆ?

2. *ಜೀವನದ ಸಾಮಾನ್ಯ ಸಂಗತಿಗಳಲ್ಲಿ ಕ್ರಿಸ್ತನು ಮಹಿಮೆ ಹೊಂದುತ್ತಾನೆ.* ಆತನ ದಿನಗಳಲ್ಲಿ ಯೆಹೂದಿ ಧರ್ಮದಲ್ಲಿದ್ದ ಆಡಂಬರದ ಸನ್ನಿವೇಶಗಳಿಂದಾಗಿ ಬೇಸರಗೊಂಡನು. ಆತನು ಸರಳ ಮಾರ್ಗದಲ್ಲಿ ಜೀವಿಸುವ ಸರಳ ಮನುಷ್ಯನಾಗಿದ್ದನು. ಆತನು ಬಲಹೀನ ಮತ್ತು ಮೂರ್ಖ ಸಂಗತಿಗಳನ್ನು ಉಪಯೋಗಿಸಿ ಮಹತ್ತಾದ ಕಾರ್ಯಗಳನ್ನು ಮಾಡಿದನು (1 ಕೊರಿಂಥ 1:27). ಪೌಲನು "ಕ್ರಿಸ್ತನಲ್ಲಿದ್ದ ಸರಳತೆಯಿಂದಾಗಿ ಕೆಲವರು ಭ್ರಷ್ಟರಾಗ ಬಹುದೆಂಬ ಭಯದಲ್ಲಿದ್ದನು" (2 ಕೊರಿಂಥ 11:3; NKJV). ಸರಳವಾದ ಆರಾಧನೆ ವಿಧಾನದಿಂದಾಗಿ ಅಥವಾ ರಕ್ಷಣೆಯ ಸರಳ ಯೋಜನೆಯಿಂದಾಗಿ ನಾವು ಅವಮಾನಕ್ಕೆ ಒಳಗಾಗಿದ್ದೇವೋ?

3. *ಪ್ರೀತಿಯಿಂದ ಪೋಷಿಸಿದ್ದ ನಂಬಿಕೆ ಮತ್ತು ಸಂಪ್ರದಾಯಗಳನ್ನು ಆತನ ದಿನಗಳಲ್ಲಿ ಯೇಸು ವಿರೋಧಿಸಿದನು.* ಯೆಹೂದ್ಯ ಧಾರ್ಮಿಕ ನಾಯಕರೊಂದಿಗೆ ಆತನು ಒಪ್ಪಿಕೊಂಡಿದ್ದರೆ, ಅವರು ಆತನೊಂದಿಗೆ ಸೇರಿಕೊಳ್ಳುತ್ತಿದ್ದರು. ಅದರ ಬದಲಾಗಿ, ಪಾಪದಿಂದ ಕೂಡಿದ್ದ ಅವರ ಅಭ್ಯಾಸಗಳನ್ನು ಮತ್ತು ಧಾರ್ಮಿಕ ತಪ್ಪುಗಳನ್ನು ಆತನು ಖಂಡಿಸಿದನು. ಅವರನ್ನು ಕಪಟಿಗಳೆಂದು ಆರೋಪಿಸಿದನು ಮತ್ತು ಪ್ರಾಮಾಣಿಕತೆಯನ್ನು ಅಭ್ಯಾಸಮಾಡ ಬೇಕೆಂದು ಅವರನ್ನು ಎಚ್ಚರಿಸಿದನು (6:2, 5, 16; 15:3-11). ಇಂದು ಕೆಲವರು ಕ್ರಿಸ್ತನು ಧಾರ್ಮಿಕ ಲೋಕದ ಜನಪ್ರಿಯ ಸಿದ್ಧಾಂತಗಳನ್ನು ಬೋಧಿಸಲಿಲ್ಲ ಎಂಬುದು ತಿಳಿದು ಬಂದಾಗ ಬೇಸರಗೊಂಡಿದ್ದಾರೆ. ಕ್ರಿಸ್ತನ ಸುವಾರ್ತೆಯೇ ದೇವರ ರಕ್ಷಿಸುವ ಬಲವಾಗಿದೆ (ರೋಮಾಪುರ 1:16).

ನಾವು ನಮ್ಮ ಜೀವಿನದಲ್ಲಿ ಲೌಕಿಕವಾದವುಗಳಿಗಿಂತ ಆತ್ಮೀಕವಾದವುಗಳಲ್ಲಿ ವಿಶೇಷ ಕಾಳಜಿಯನ್ನು ವಹಿಸಬೇಕು. ಒಂದು ವೇಳೆ ಪ್ರತಿದಿನ ಕ್ರಿಸ್ತನು ಬಂದು ನಮ್ಮೊಟ್ಟಿಗೆ ನಡೆಯುವುದಾದರೆ ನಮ್ಮ ಸ್ಥಿತಿ ಏನು? ಆತನು ನಮಗೆ ಏನು ಹೇಳುತ್ತಾನೋ ಅದಕ್ಕಾಗಿ ನಾವು ಬೇಸರಗೊಳುತ್ತೇವೋ?

---

ಟಿಪ್ಪಣಿಗಳು

[1]Tosefta *Qiddushin* 1.11. [2]Walter Bauer, *A Greek-English Lexicon of the New Testament and Other Early Christian Literature,* 3d ed., rev. and ed. Frederick W. Danker (Chicago: University of Chicago Press, 2000), 995. [3]ನೋಡಿರಿ W. F. Albright and C. S. Mann, *Matthew,* The Anchor Bible (Garden City, N.Y.: Doubleday & Co., 1971), 173. [4]Richard Batey, *Jesus and the Forgotten City* (Grand Rapids, Mich.: Baker Book House, 1991), 70–82.